ನಾನು ಕಳುಹಿಸಿರುವಂತಾದ್ದು ಇದೆ. ಈ ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಇಲ್ಲಿ ಅತ್ಯಂತ ಪ್ರಮುಖವಾಗಿರತಕ್ಕಂಥಾದ್ದು ನೆರೆಹಾವಳಿ. ಆದ್ದರಿಂದ ತಾವು ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ ನೆರೆಹಾವಳಿಗೆ ತುತ್ತಾಗಿರತಕ್ಕಂಥ ರೈತರ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ತಾವು ಅನುಮತಿ ಕೊಡಬಹುದು.

(ಗೊಂದಲ)

ಶ್ರಿ ಸಿ. ಬೈರೇಗೌಡ:– ತಾವು ಬಾಯಿಗೆ ಬಂದ ಹಾಗೆ ಮಾತನಾಡುವುದಕ್ಕಾಗುವುದಿಲ್ಲ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಹೊಸದಾಗಿ ತಾವು ಮುಖ್ಯಮಂತ್ರಿಗಳಾಗಿ ಬಂದಿದ್ದೀರಿ. ತಮಗೆ ಒಳ್ಳೆಯ ಹೆಸರು ಬರಬೇಕೆಂದು ನನ್ನ ಆಸೆ....

(ಗೊಂದಲ)

ಶ್ರೀ ಸಿ. ಬೈರೇಗೌಡ:– ಇದು ಆಗುವುದಿಲ್ಲ....

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಅಯೋಧ್ಯೆ ಘಟನೆಯಲ್ಲಿ ಆಗಿರತಕ್ಕಂಥ ಕೃತ್ಯಗಳನ್ನು ಮುಚ್ಚಿ ಹಾಕುವುದಕ್ಕೆ ಇವರು ಹೊರಟಿದ್ದಾರೆ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಇದು ಸರಿಯಲ್ಲ.....

(ಗೊಂದಲ)

(ಭಾರಿ ಗೊಂದಲದ ನಡುವೆ ಬಿ.ಜಿ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಅಧ್ಯಕ್ಷರೇ, ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮತ್ತು ಬಿ.ಜೆ.ಪಿ.ಯವರು ಇವತ್ತು ಅಯೋಧ್ಯೆ ಪ್ರಕರಣದಲ್ಲಿ ಆಗಿರತಕ್ಕಂತ ನರಹತ್ಯೆ ಏನು ಇದೆ ಅದರ ಬಗ್ಗೆ ಆಗಬೇಕಾದ ಚರ್ಚೆಯನ್ನು ತಪ್ಪಿಸುವುದಕ್ಕೆ ಇವತ್ತು ಇವರು ಮಾಡಿರತಕ್ಕಂಥ ಪಿತೂರಿ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಒಂದು ರಾಜಕೀಯ ಕುತಂತ್ರ. ಇವತ್ತು ದೇಶದಲ್ಲಿ ಸಾವಿರಾರು ಜನರ ಪ್ರಾಣಗಳ ಹತ್ಯೆಗೆ ಕಾರಣರಾಗಿರತಕ್ಕ ಈ ಜನ ಇವತ್ತು ರೈತರ ಹೆಸರಿನಲ್ಲಿ ಜನಗಳಿಗೆ ಮೋಸ ಮಾಡುವುದಕ್ಕೆ ಹೊರಟಿದ್ದಾರೆಂದು ನಾನು ಸ್ಪಷ್ಟಪಡಿಸಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್:– ನಿಲುವಳಿ ಸೂಚನೆ ಯಾವ ಮಟ್ಟಕ್ಕೆ ಬಂತು ಎನ್ನುವುದನ್ನು ತಾವು ಹೇಳಲಿಲ್ಲ.....

(ಗೊಂದಲ)

ಉಪಾಧ್ಯಕ್ಷಿಣಿಯವರು:– ಪ್ರಶ್ನೋತ್ತರ ವೇಳೆ ಆಗಲಿ, ಆಮೇಲೆ ತೆಗೆದುಕೊಳ್ಳೋಣ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.